**ನಗರಸಭಾ ಕಾರ್ಯಾಲಯ, ಮಂಡ್ಯ.**

ಸಂಖ್ಯೆ:ನಸಮಂ/ಆಡಳಿತಾಧಿಕಾರಿಗಳ ಸಭೆ/9/2007–08. ದಿನಾಂಕ: 29–6–2007.

ದಿನಾಂಕ:29–6–2007ರಂದು ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು , ಮಂಡ್ಯ ಜಿಲ್ಲೆ, ಮಂಡ್ಯ ಹಾಗೂ ಆಡಳಿತಾಧಿಕಾರಿಗಳು, ನಗರಸಭೆ, ಮಂಡ್ಯರವರು ನಡೆಸಿದ ಸಭೆ ನಡವಳಿಕೆಗಳು.

| |
|---|
| **ವಿಷಯ: 1:–** ಮಂಡ್ಯ ಸಿಟಿ ಕಲ್ಲಹಳ್ಳಿ ಶ್ರೀ ಮಸಣಮ್ಮ ದೇವಸ್ಥಾನದ ಜಾಗವು ಮಂಡ್ಯ ನಗರಸಭೆಯ ವ್ಯಾಪ್ತಿಗೆ ಸೇರಿದ್ದು 27'*16½ ಅಡಿ ನಿವೇಶನವನ್ನು ನಗರಸಭೆಯ ಆಸ್ತಿಯನ್ನಾಗಿ ಆಸ್ತಿ ವಹಿಯಲ್ಲಿ ದಾಖಲಿಸುವ ಬಗ್ಗೆ. |
| **ತೀರ್ಮಾನ:1:–** ವಿಷಯದ ಬಗ್ಗೆ ಪರಿಶೀಲಿಸಿ ಸಾರ್ವಜನಿಕ ಪ್ರಕಟಣೆ ಹೊರಡಿಸಿ ಕಾನೂನು ಅನುಸರಿಸಿ ನಗರಸಭೆಯ ಆಸ್ತಿ ವಹಿಯಲ್ಲಿ ನಗರಸಭೆಯ ಆಸ್ತಿಯನ್ನಾಗಿ ದಾಖಲ್ಮಾಡಲು ತೀರ್ಮಾನಿಸಲಾಯಿತು. |
| **ವಿಷಯ:2:–** ಮಂಡ್ಯ ನಗರ ವ್ಯಾಪ್ತಿಯಲ್ಲಿ 11 ವಾರ್ಡ್‌ಗಳನ್ನು (ಪ್ಯಾಕೇಜ್–1) ಹಾಗೂ 18 ವಾರ್ಡ್‌ಗಳನ್ನು (ಪ್ಯಾಕೇಜ್–2) ರ ಮೂಲಕ ಮಾಸಿಕ ಕ್ರಮವಾಗಿ ರೂ.3,50,000/– ಹಾಗೂ ರೂ.3,65,000/–ರಂತೆ ನೈರ್ಮಲ್ಯ ಕಾಮಗಾರಿಗೆ ಗುತ್ತಿಗೆ ನೀಡಲಾಗಿದ್ದು, ಕಾರ್ಯಾದೇಶದಂತೆ ದಿನಾಂಕ:1–8–2006 ರಿಂದ 31–3–2007 ರವರೆಗೆ ಸದರಿ ಗುತ್ತಿಗೆ ಅವಧಿ ಮುಗಿಯಲಿದ್ದು, ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಸದರಿಯವರ ಗುತ್ತಿಗೆಯನ್ನು ಮೂರು ತಿಂಗಳ ಕಾಲ ಅಂದರೆ ದಿನಾಂಕ:30–6–2007ರವರೆಗೆ ಮುಂದುವರಿಸಲಾಗಿತ್ತು. ಈಗ ಸದರಿ ಗುತ್ತಿಗೆ ದಾರರು ಪತ್ರದ ಮೂಲಕ ಮುಂದಿನ ಮೂರು ವರ್ಷಗಳ ಅವಧಿಗೆ ಮುಂದುವರೆಸಲು ಕೋರಿದ್ದು, ಈ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ. |
| **ತೀರ್ಮಾನ:2:–** ಎರಡು (2) ವರ್ಷಗಳ ಕಾಲ ಮುಂದುವರೆಸುವುದು. |

ಸಹಿ:
ಆಡಳಿತಾಧಿಕಾರಿಗಳು,
ನಗರಸಭೆ, ಮಂಡ್ಯ.